ಓ ಎಸ್ ನಂ. 4/2016
ಡಿ ಡಬ್ಲ್ಯೂ 1
ದಿನಾಂಕ 22-03-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ 14 ನೇ ಪ್ರತಿವಾದಿ ಪರಃ ಶ್ರೀ ಕೆ ಎ ವಕೀಲರಿಂದಃ</u>

ನಾನು ಬಿ ಇ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ತಿಪಟೂರಿನಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಬೀರೂರಿನಿಂದ ತಿಪಟೂರಿಗೆ ಓಡಾಡಿಕೊಂಡು ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಮೊದಲಿನಿಂದಲೂ ಬೀರೂರಿನ ಮನೆಯಲ್ಲಿದ್ದೇನೆ ಎಂದರೆ ಸರಿ. ನನಗೆ ನಮ್ಮ ಮನೆಯ ವಿದ್ಯಾಮಾನಗಳು ಗೊತ್ತಿದೆ ಎಂದರೆ ಸರಿ. ನನ್ನ ಅಜ್ಜ ಅಶ್ವತ ನಾರಾಯಣ ಶ್ರೇಷ್ಟಿ ತಂದೆಯ ಹೆಸರು ನಾಗಪ್ಪ ಶ್ರೇಷ್ಟಿ ಆಗಿರುತ್ತದೆ. ಸದರಿ ನಾಗಪ್ಪ ಶ್ರೇಷ್ಟಿರವರಿಗೆ ಒಟ್ಟು ಇಬ್ಬರು ಮಕ್ಕಳು, ನನ್ನ ತಾತ ಅಶ್ವತ ನಾರಾಯಣ ಶ್ರೇಷ್ಟಿ ಮತ್ತು ಇನ್ನೊಬ್ಬರು ಅವರ ಹೆಸರು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ನಾಗಪ್ಪ ಶ್ರೇಷ್ಟಿರವರು ನಿಂಗಪ್ಪ ಶ್ರೇಷ್ಟಿ, ನನ್ನ ಅಜ್ಜ ಅಶ್ವತ ನಾರಾಯಣ ಶ್ರೇಷ್ಟಿ ಮತ್ತು ರಾಮಸ್ವಾಮಿ ಶೆಟ್ಟರು ಎಂಬ ಮೂರು ಜನ ಮಕ್ಕಳು ಇರುವುದು ಗೊತ್ತ ಎಂದರೆ ಸಾಕ್ಷಿ ನನ್ನ ಅಜ್ಜ ಅಶ್ವತ ನಾರಾಯಣ ಶ್ರೇಷ್ಟಿ ರವರ ಮಾತ್ರ ನನಗೆ ಗೊತ್ತು, ಇತರರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಂಗಪ್ಪ ಶ್ರೇಷ್ಟಿರವರ ಮಕ್ಕಳು ಯಾವಾಗ ವಿಭಾಗ ಆಗಿರುತ್ತಾರೆಂದು ನನಗೆ ಗೊತ್ತಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ದಿನಾಂಕ

03/05/1944 ರಲ್ಲಿ ಸದರಿ ನಿಂಗಪ್ಪ ಶ್ರೇಷ್ಟಿ ಮತ್ತು ಅವರ ಮಕ್ಕಳು ವಿಭಾಗ ಆಗಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ, ದಾಖಲೆ ನೋಡಬೇಕು ಎಂದು ನುಡಿಯುತ್ತಾರೆ. ಆ ವಿಭಾಗದಲ್ಲಿ ಪ್ರಸ್ತುತ ದಾವೆಯ ಐಟಂ ನಂ.3 ರಿಂದ 8 ರ ಸ್ವತ್ತುಗಳು ನನ್ನ ಅಜ್ಜನಾದ ಅಶ್ವತ ನಾರಾಯಣ ಶ್ರೇಷ್ಟಿರವರ ಹಿಸ್ಸೆಗೆ ಬಂದಿರುತ್ತವೆ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.9 ರ ಆಸ್ತಿಯನ್ನು ನನ್ನ ಅಜ್ಜಿಯಾದ ರಂಗಲಕ್ಷ್ಮಮ್ಮರವರು ಲಿಂಗಪ್ಪ ಶ್ರೇಷ್ಟಿರವರಿಂದ ನನ್ನ ಅಜ್ಜ ಅಶ್ವತ ನಾರಾಯಣ ಶ್ರೇಷ್ಟಿರವರ ಹೆಸರಿನಲ್ಲಿ ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ಸದರಿ ಸ್ವತನ್ನು ನನ್ನ ಅಜ್ಜ ಅಶ್ವತ ನಾರಾಯಣ ಶ್ರೇಷ್ಟಿರವರು ಅವರ ಸ್ವಂತ ಹಣದಿಂದ ಖರೀದಿಸಿದ್ದಾರೆ ಎಂದು ನುಡಿಯುತ್ತಾರೆ.

ನನ್ನ ಅಜ್ಜ ಅಶ್ವತ ನಾರಾಯಣ ಶ್ರೇಷ್ಟಿರವರಿಗೆ ಒಟ್ಟು 11 ಜನ ಮಕ್ಕಳು. ಅವರಲ್ಲಿ 6 ಜನ ಹೆಣ್ಣು ಮಕ್ಕಳು 5 ಜನ ಗಂಡು ಮಕ್ಕಳು. ನನ್ನ ಅಜ್ಜ ಅಶ್ವತ ನಾರಾಯಣ ಶ್ರೇಷ್ಟಿರವರು ಕಿರಾಣಿ ಅಂಗಡಿ ಹೊಂದಿದ್ದರು. ದಾವಾ ಐಟಂ ನಂ.3 ರಿಂದ 7 ರ ಆಸ್ತಿಗಳು ಖುಷ್ಕಿ ಜಮೀನು ಎಂದರೆ ಸರಿ. ಸಾಕ್ಷಿ ಮುಂದುವರೆದು ನೀರಾವರಿ ಸೌಲಭ್ಯ ಇಲ್ಲ, ಒಣ ಜಮೀನು ಎಂದು ನುಡಿಯುತ್ತಾರೆ. ನನ್ನ ತಂದೆ ಪಿಯುಸಿವರೆಗೆ ಬೀರೂರಿನಲ್ಲಿ ವಿದ್ಯಾಭ್ಯಾಸ ಮಾಡಿರುತ್ತಾರೆ. ಬೀರೂರಿನಲ್ಲಿ ಆ ಸಮಯದಲ್ಲಿ ಶಾಲೆಗಳು ಇದ್ದವಾ ಎಂದರೆ ಸಾಕ್ಷಿ ನನ್ನ ತಂದೆ ಸಾಧಾರಣ

9 ನೇ ತರಗತಿವರೆಗೆ ಶಾಲೆಗೆ ಹೋಗಿ ವಿದ್ಯಾಬ್ಯಾಸ ಮಾಡಿರುತ್ತಾರೆ, ಅವರಿಗೆ ಆರ್ಥಿಕ ಕೊರತೆ ಇದ್ದರಿಂದ ಮುಂದಿನ ವಿದ್ಯಾಬ್ಯಾಸವನ್ನು ಶಾಲೆಗೆ ಹೋಗಿ ಮಾಡಿರುವುದಿಲ್ಲ, ಆದರೆ ಪಿಯುಸಿವರೆಗಿನ ಪುಸ್ತಕಗಳನ್ನು ಓದಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಚಿಕ್ಕಪ್ಪ ನಟರಾಜುರವರು ಬಿ ಎ ವಿದ್ಯಾಬ್ಯಾಸ ಮಾಡಿರುತ್ತಾರೆ. 14 ನೇ ಪ್ರತಿವಾದಿ ವರದರಾಜುರವರು ಪಿಯುಸಿವರೆಗೆ ವಿದ್ಯಾಬ್ಯಾಸ ಮಾಡಿದ್ದಾರೆಂದು ನಾನು ತಿಳಿದುಕೊಂಡಿರುತ್ತೇನೆ. ನನ್ನ ದೊಡ್ಡಪ್ಪ ರಾಮಸ್ವಾಮಿರವರು ಶಾಲೆ ಕಲಿತಿರಲಿಲ್ಲ. ಮತ್ತೊಬ್ಬ ದದೊಡ್ಡಪ್ಪ ಲಕ್ಷ್ಮೀನಾರಾಯಣರವರು ಎಷ್ಟು ಕಲಿತಿರುತ್ತಾರೆ ಎಂದರೆ ಸಾಕ್ಷಿ ಅವರು ಕಲಿತಿರುವುದಿಲ್ಲ ಆದರೆ ಓದುತ್ತಾರೆ ಎಂದು ನುಡಿಯುತ್ತಾರೆ.

ಹಂಸರತ್ನ ಲೀಲಾವತಿ ಪ್ರಭಾವತಿ ಪದ್ಮವತಿ ಗಾಯತ್ರಿ ಮತ್ತು ಇಂದಿರಾರವರು ಸಹ ಸಾಕಷ್ಟು ವಿದ್ಯಾಬ್ಯಾಸ ಮಾಡಿರುತ್ತಾರೆ ಎಂದರೆ ಸಾಕ್ಷಿ ಪದ್ಮಾವತಿ ಗಾಯಿತ್ರಿ ಮತ್ತು ಇಂದಿರಾರವರು ಡಿಗ್ರಿ ಮಾಡಿರುತ್ತಾರೆ, ಉಳಿದವರ ಬಗ್ಗೆ ನನಗೆ ನಿಖರವಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸುಮಾರು 25-30 ವರ್ಷಗಳ ಹಿಂದೆ ಬೀರೂರಿನಲ್ಲಿ ಕಾಲೇಜು ಇದ್ದವಾ ಎಂದರೆ ಸಾಕ್ಷಿ ನನಗೆ 1992 ರಲ್ಲಿ ಬೀರೂರಿನಲ್ಲಿ ಕಾಲೇಜು ಇದ್ದ ಬಗ್ಗೆ ಮಾಹಿತಿ ಇದೆ ಎಂದು ನುಡಿಯುತ್ತಾರೆ. ಬೀರೂರಿನಲ್ಲಿ ಸರಿಯಾದ ವಿದ್ಯಾಸಂಸ್ಥೆಗಳು ಇಲ್ಲದ ಕಾರಣ ನನ್ನ ಅಜ್ಜ ಅವರ ಮಕ್ಕಳನ್ನು ವಿದ್ಯಾಬ್ಯಾಸಕ್ಕೆ ಬೇರೆ ಬೇರೆ ಊರುಗಳಿಗೆ ಕಳುಹಿಸಿದ್ದರು ಎಂದರೆ

ಸರಿಯಲ್ಲ. ದೊಡ್ಡ ಕುಟುಂಬ ಆಗಿದ್ದರು ಸಹ ನನ್ನ ಅಜ್ಜ ಅಶ್ವತ ನಾರಾಯಣ ಶ್ರೇಷ್ಠಿರವರು ತನ್ನ ಎಲ್ಲಾ ಮಕ್ಕಳಿಗೂ ಶಕ್ತಿ ಮೀರಿ ವಿದ್ಯಾಭ್ಯಾಸ ಕೊಡಿಸಿರುತ್ತಾರೆ ಎಂದರೆ ಸಾಕ್ಷಿ ನನ್ನ ತಂದೆ ಸಚ್ಚಿದಾನಂದರವರಿಗೆ ವಿದ್ಯಾಭ್ಯಾಸ ಕೊಡಿಸಿಲ್ಲ ಎಂದು ನುಡಿಯುತ್ತಾರೆ. ನನ್ನ ಅಜ್ಜ ಕಿರಾಣಿ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. ನಾವು ಆರ್ಯ ವೈಶ್ಯ ಸಮಾಜಕ್ಕೆ ಸೇರಿದ್ದವರಾಗಿದ್ದು ಹೆಣ್ಣು ಮಕ್ಕಳ ಮದುವೆಯ ಸಮಯದಲ್ಲಿ ವರದಕ್ಷಿಣೆ ಮತ್ತು ವರೋಪಚಾರ ಮಾಡುವ ಸಂಪ್ರದಾಯ ಇದೆ ಎಂದರೆ ಸಾಕ್ಷಿ ನಮ್ಮಲ್ಲಿ ಆ ಸಂಪ್ರದಾಯ ಇಲ್ಲ ಎಂದು ನುಡಿಯುತ್ತಾರೆ. ಮದುವೆಯ ಸಮಯದಲ್ಲಿ ವರನಿಗೆ ಬೆಳ್ಳಿ ತಟ್ಟೆ ಚಿನ್ನದ ಆಭರಣಗಳನ್ನು ನೀಡುವ ಸಂಪ್ರದಾಯ ಇದೆ ಎಂದರೆ ಸಾಕ್ಷಿ ಕೊಡಲೇ ಬೇಕು ಅಂತ ಇಲ್ಲ ಅವರ ಇಷ್ಟಕ್ಕೆ ಬಿಟ್ಟಿದ್ದು ಎಂದು ನುಡಿಯುತ್ತಾರೆ. ನನ್ನ ಅತ್ತೆಯರನ್ನು ನನ್ನ ಅಜ್ಜ ಅಶ್ವತ ನಾರಾಯಣ ಶ್ರೇಷ್ಠಿರವರು ಒಳ್ಳೆಯ ಕುಟುಂಬಕ್ಕೆ ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸಾಕ್ಷಿ ಹೌದು ಅದರಲ್ಲಿ ನನ್ನ ತಂದೆಯ ಪಾತ್ರ ಪ್ರಮುಖವಾಗಿದ್ದು ನನ್ನ ಅಜ್ಜ ಅಶ್ವತ ನಾರಾಯಣ ಶ್ರೇಷ್ಠಿರವರಿಗೆ ಓಡಾಡಲು ಆಗುತ್ತಿಲ್ಲದೆ ಆದುದರಿಂದ ನನ್ನ ತಂದೆಯೇ ಆ ಸಂಪೂರ್ಣ ಜವಾಬ್ದಾರಿಯನ್ನು ನಿರ್ವಹಿಸಿರುತ್ತಾರೆಎಂದು ನುಡಿಯುತ್ತಾರೆ. 6 ಜನ ಹೆಣ್ಣು ಮಕ್ಕಳು ಮದುವೆಯನ್ನು ಬೀರೂರಿನಲ್ಲಿ ವಿಜೃಂಬಣೆಯಿಂದ ಮಾಡಿರುತಾತರೆ ಎಂದರೆ ಸಾಕ್ಷಿ ಹೌದುಎಲ್ಲಾರೂ ಸೇರಿ ಮಾಡಿರುತ್ತಾರೆ ಎಂದು

ನುಡಿಯುತ್ತಾರೆ. ಹೆಣ್ಣು ಮಕ್ಕಳ ಮದುವೆಗೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿರುತ್ತಾರೆ ಎಂದರೆ ಸಾಕ್ಷಿ ಅವತ್ತಿಗೆ ಸಾವಿರಾರು ರೂಪಾಯಿ ಖರ್ಚು ಮಾಡಿರಬಹುದು ಎಂದು ನಡಿಯುತ್ತಾರೆ. ದಾವಾ ಐಟಂ ನಂ.8 ರ ಸ್ವತ್ತು ಅಶ್ವತ ನಾರಾಯಣ ಶ್ರೇಷ್ಟಿರವರ ಹೆಸರಿನಲ್ಲಿದ್ದು ಅದಲ್ಲಿ ಹಿಟ್ಟಿನ ಗಿರಣಿ, ಮನೆ ಮತ್ತು ಕಿರಾಣಿ ಅಂಗಡಿ ಇತ್ತು ಎಂದರೆ ಸರಿ. ಸದರಿ ಸ್ವತ್ತಿನಲ್ಲಿ ಈಗ ನಾವು ವಾಸಿಸುತ್ತಿದ್ದೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೊದಲು ಎಲ್ಲಾರೂ ಅಲ್ಲಿ ವಾಸಿಸುತ್ತಿದ್ದೇವು ನಂತರ ಬೇರೆ ಬೇರೆ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.8 ರ ಸ್ವತ್ತಿನಲ್ಲಿರುವ ಹಿಟ್ಟಿನ ಗಿರಣಿ ಮತ್ತು ಕಿರಾಣಿ ಅಂಗಡಿಯಿಂದ ಬಂದ ಆದಾಯದಿಂದ ಅಶ್ವತ ನಾರಾಯಣ ಶ್ರೇಷ್ಟಿರವರು ಕುಟುಂಬದ ನಿರ್ವಹಣೆ ಮಾಡುತ್ತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಂದೆ ಎಲೆಕ್ಟ್ರಿಕ್ ಕೆಲಸ ಮಾಡುತ್ತಿದ್ದು ಅವರು ಸಹ ಸಹಾಯ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ದಾವಾ ಐಟಂ ನಂ.8 ರ ಸ್ವತ್ತಿನಿಂದ ಬಂದ ಆದಾಯ ಅಶ್ವತ ನಾರಾಯಣ ಶ್ರೇಷ್ಟಿರವರ ಕುಟುಂಬದ ನಿರ್ವಹಣೆಗೆ ಸಾಕಾಗುತ್ತಿತ್ತು ಎಂದರೆ ಸಾಕ್ಷಿ ಲಾಭಾಂಶ ಬರುತ್ತಿದ್ದು ಉಳಿತಾಯ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ಲಾಭಾಂಶ ಬರುತ್ತಿದ್ದ ಬಗ್ಗೆ ದಾಖಲೆಗಳನ್ನು ನಾನು ನೋಡಿರುತ್ತೇನಾ ಎಂದರೆ ಸಾಕ್ಷಿ ನನ್ನ ಅಜ್ಜ ಲೆಕ್ಕ ಬರೆಯುತ್ತಿದ್ದರು ನಾನು ನೋಡಿದ್ದೇನೆ ಎಂದು ನುಡಿಯುತ್ತಾರೆ. ಯಾವ ಯಾವ

ವರ್ಷದಲ್ಲಿ ಎಷ್ಟು ಲಾಭ ಬಂದಿದೆಯೆಂದು ಹೇಳಲಾಗುತ್ತದೆಯಾ ಎಂದರೆ ಸಾಕ್ಷಿ ಕಷ್ಟ ಎಂದು ನುಡಿಯುತ್ತಾರೆ. ನನ್ನ ಅಜ್ಜ ಬರೆದಿಡುತ್ತಿದ್ದ ಲೆಕ್ಕಪತ್ರದ ದಾಖಲೆಗಳನ್ನು ನಾನು ನೋಡಿರುತ್ತೇನೆ ಎಂದು ಹೇಳಿದ್ದು ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ಅದು ಸಿಕ್ಕಿದರೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.8 ರ ಮನೆಯಲ್ಲಿ ನನ್ನ ತಂದೆ ಮರಣ ಹೊಂದಿದ ನಂತರ ನಾವೇ ವಾಸ ಮಾಡುತ್ತಿದ್ದೇವೆ ಎಂದರೆ ಸರಿ. ಆಗಾಗಿ ಸದರಿ ಲೆಕ್ಕಪತ್ರದ ದಾಖಲೆಗಳು ನಮಗೆ ಸಿಗಬೇಕು ಎಂದರೆ ಸಾಕ್ಷಿ 2006 ರಲ್ಲಿ ನನ್ನ ಅಜ್ಜ ಮೃತ ಪಟ್ಟಿದ್ದು ಆ ಸಮಯದಲ್ಲಿ ದಾವಾ ಐಟಂ ನಂ.8 ರ ಮನೆಯಲ್ಲಿ ಎಲ್ಲಾರೂ ವಾಸಿಸುತ್ತಿದ್ದರು ಆ ದಾಖಲೆ ಇತರರಿಗೂ ಸಿಕ್ಕಿರಬಹುದು ಎಂದು ನುಡಿಯುತ್ತಾರೆ. ನನ್ನ ಅಜ್ಜ ಲಾಭಾಂಶ ಬರುತ್ತಿದ್ದ ಬಗ್ಗೆ ಯಾವುದೇ ದಾಖಲೆ ಬರೆದು ಇಡದೆ ಇದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ದೊಡ್ಡಪ್ಪ ಲಕ್ಷ್ಮೀನಾರಾಯಣರವರು 1970 ರಲ್ಲಿ ನನ್ನ ಅಜ್ಜ ಅಶ್ವತ ನಾರಾಯಣ ಶ್ರೇಷ್ಠಿರವರಿಂದ ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ಹೋಗಿರುತ್ತಾರೆ ಎಂದರೆ ಸರಿ. 1967-68 ರಲ್ಲಿ ನನ್ನ ದೊಡ್ಡಪ್ಪ ರಾಮಸ್ವಾಮಿ ಶೆಟ್ಟರು ನನ್ನ ಅಜ್ಜ ಅಶ್ವತ ನಾರಾಯಣ ಶ್ರೇಷ್ಠಿರವರಿಂದ ವಿಭಾಗ ಮಾಡಿಕೊಂಡು ಹೊರಗೆ

ಹೋಗಿರುತಾತರೆ ಎಂದರೆ ಸಾಕ್ಷಿ ಹೌದು ನನಗೆ ನಿಖರವಾಗಿ ವರ್ಷ .ಗೊತ್ತಿಲ್ಲ ಎಂದು ನುಡಿಯುತ್ತಾರೆ

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.